## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 264/2023

**ಸಾಕ್ಷಿಯನ್ನು ದಿಃ 25-02-2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ.CS ವಕೀಲರಿಂದಃ**

ಆರೋಪಿಯ ಪಾಂಡವಪುರದ ವಿಳಾಸಕ್ಕೆ ಕೊಟ್ಟ ನೋಟಿಸ್ ಜಾರಿಯಾಗಿದೆಯೇ ಎಂದರೆ ಜಾರಿಯಾಗಿದೆ. ಆರೋಪಿ ಪಾಂಡವಪುರ ವಿಳಾಸದಲ್ಲಿ ವಾಸವಿಲ್ಲದೇ ಇದ್ದರೂ ಸಹ ಸರಿಯಾದ ವಿಳಾಸಕ್ಕೆ ನೋಟೀಸ್ ನೀಡಿದರೆ ಜಾರಿಯಾಗಿ ಉತ್ತರ ಕೊಡುತ್ತಾರೆ ಎಂಬ ಕಾರಣಕ್ಕಾಗಿ ಪಾಂಡವಪುರದ ವಿಳಾಸಕ್ಕೆ ನೋಟೀಸ್ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ದೂರದ ಸಂಬಂಧಿ. ಆರೋಪಿಗೆ ಇಂಗ್ಲಿಷ್ ಓದಲು ಬರೆಯಲು ಬರುವುದಿಲ್ಲ ಎಂದರೆ ಗೊತ್ತಿಲ್ಲ. ನನಗೆ ಸ್ವಲ್ಪ ಓದಲು ಬರೆಯಲು ಬರುತ್ತದೆ. ಯಾವುದೇ ಒಂದು ಬರವಣಿಗೆಯ ಶಾಯಿಯಲ್ಲಿ ವ್ಯತ್ಯಾಸ ಇದ್ದರೆ ನನಗೆ ಗೊತ್ತಾಗುತ್ತದೆ ಎಂದರೆ ಇಲ್ಲ. ಆರೋಪಿ ನಿಪಿ-1ರ ಚೆಕ್ಕಿಗೆ ನಮ್ಮ ಮನೆಯಲ್ಲಿಯೇ ಸಹಿ ಮಾಡಿದರು. ಕನ್ನಡ ಭಾಷೆಯಲ್ಲಿ ಸಹಿ ಹಾಕಿದರು. ದಿಃ 10.01.2023 ರಂದು ನನ್ನ ಬಳಿ ಆರೋಪಿಗೆ ಸಾಲ ಕೊಡುವಷ್ಟು ಹಣ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ನಿಪಿ-1ರ ಚೆಕ್ಕು ಅಮಾನ್ಯಗೊಂಡಿದೆ ಎಂದು ನಾನು ಆರೋಪಿಗೆ ಫೋನ್ ಮೂಲಕವು ಸಹ ತಿಳಿಸಿದ್ದೇನೆ. ಈ ಬಗ್ಗೆ ನೋಟೀಸ್ ಮತ್ತು ದೂರಿನಲ್ಲಿ ಹೇಳಿದ್ದಿರಾ ಎಂದರೆ ಇಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ಬಡ್ಡಿ ಕೊಡುವ ಮಾತುಕತೆಯಾಗಿಲ್ಲ. ನಾನು ಆರೋಪಿಗೆ ರೂ.500ರ ಮುಖಬೆಲೆಯ ನೋಟುಗಳನ್ನು ಕೊಟ್ಟಿದ್ದೇನೆ. ಸದರಿ ಹಣ ಬ್ಯಾಂಕ್ ನಲ್ಲಿತ್ತು ಅದನ್ನು ಬ್ಯಾಂಕ್ ನಿಂದ ತಂದು ಮನೆಯಲ್ಲಿಟ್ಟಿದ್ದೆ. ಆರೋಪಿಗೆ ಚೆಕ್ ಅಥವಾ RTGS ಮೂಲಕ ಹಣ ಕೊಡಲು ತೊಂದರೆ ಇತ್ತೇ ಎಂದರೆ ಕ್ಯಾಷ್ ಬೇಕು ಎಂದು ಹೇಳಿದರು. ಒಂದು ದಿನ ಮುಂಚಿತವಾಗಿ ಹಣ ಕೇಳಿದರು. ಒಬ್ಬ ವ್ಯಕ್ತಿ ಚೆಕ್ ಮೂಲಕ ಒಂದುದಿನಕ್ಕೆ ಕೇವಲ ರೂ.50 ಸಾವಿರ ಮಾತ್ರ ಡ್ರಾ ಮಾಡಬಹುದು ಎಂದರೆ ಸರಿಯಲ್ಲ. ಚೆಕ್ ಮೂಲಕ ಹಣ ಡ್ರಾ ಮಾಡಿದ ಬಗ್ಗೆ ನನ್ನ ಬಳಿ ದಾಖಲೆ ಇದೆ. ನಿಪಿ-1(ಎ) ಸಹಿ ಆರೋಪಿಯದ್ದು ಹೌದೇ ಅಲ್ಲವೇ ಎಂಬ ಬಗ್ಗೆ ಬೆರಳಚ್ಚು ತಜ್ಞರಿಗೆ ಕಳುಹಿಸಿ ವರದಿ ಪಡೆಯಲು ನನ್ನ ಅಭ್ಯಂತರ

ಇಲ್ಲ. ನಿಪಿ-1(ಎ) ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಸಂಬಂಧಿಯಾಗಿರುವ ಕಾರಣ ನಾನು ಅವರ ಮನೆಗೆ ಹೋಗಿ ಬಂದು ಮಾಡುತ್ತಿದ್ದಾಗ ಅವರ ಚೆಕ್ಕನ್ನು ತೆಗೆದು ನಾನೇ ಸ್ವತಃ ಅವರ ಸಹಿಯನ್ನು ಚೆಕ್ ನಲ್ಲಿ ಸೃಷ್ಟಿಸಿ ಬ್ಯಾಂಕ್ ಗೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನೋಟೀಸ್ ಜಾರಿಯಾದರೆ ಸಹಿಯನ್ನು ಸೃಷ್ಟಿ ಮಾಡಿದ ಬಗ್ಗೆ ಉತ್ತರ ಕೊಡುತ್ತಾರೆ ಎಂಬ ಕಾರಣಕ್ಕಾಗಿ ಸುಳ್ಳು ವಿಳಾಸಕ್ಕೆ ನೋಟೀಸ್ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ಸಹಿಯನ್ನು ಸೃಷ್ಟಿ ಮಾಡಿದ ಬಗ್ಗೆ ಪೋಲೀಸರಿಗೆ ದೂರು ಕೊಟ್ಟರೆ ನನಗೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕಾಗಿ ಸುಳ್ಳು ವಿಳಾಸಕ್ಕೆ ನೋಟೀಸನ್ನು ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ರೂ.2ವರೆ ಲಕ್ಷ ಸಾಲ ಕೊಡುವಷ್ಟು ಆರ್ಥಿಕ ಶಕ್ತಿ ನನಗೆ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.